ಮೂಲ ದಾವಾ ಸಂಖ್ಯೆ. 84/2017 ಪಿ ಡಬ್ಲ್ಯೂ 1

(ದಿನಾಂಕ 10-06-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣಿಕರಿಸಲಾಯಿತು.)

ಪಾಟೀ ಸವಾಲುಃ 1 ನೇ ಪ್ರತಿವಾದಿ ಪರ ಶ್ರೀಮತಿ ಎಸ್ ಹೆಚ್ ವಿ ವಕೀಲರಿಂದಃ-

ಈ ದಾವೆಯನ್ನು ನಾನು 1 ರಿಂದ 3 ನೇ ಪ್ರತಿವಾದಿಗಳ ವಿರುದ್ಧ ದಾಖಲಿಸಿದ್ದೇನೆ. ದಾವಾ ಜಮೀನು ಸರ್ವೆ ನಂ.452 ಇದು 4.52 ಎಕರೆ ಇರುತ್ತದೆ. ದಾವಾಸ್ತಿಯನ್ನು ನಾನು ಖರೀದಿಸಿರುತ್ತೇನೆ. ದಾವಾಸ್ತಿ ಖರೀದಿಸುವ ಸಮಯದಲ್ಲಿ ನನ್ನ ಗಂಡ 1 ನೇ ಪ್ರತಿವಾದಿ ಸುಮಾರು 1 ವರೆ ಯಿಂದ 2 ಲಕ್ಷ ಹಣವನ್ನು ನೀಡಿದ್ದಾರೆಂದರೆ ಸರಿ. ಸದರಿ ಜಮೀನಿನ ನೊಂದಣಿ ಖರ್ಚನ್ನು ನನ್ನ ಗಂಡ ನೋಡಿಕೊಂಡಿರುತ್ತಾನೆಂದರೆ ಸರಿ. ನಾನು, ನನ್ನ ಗಂಡ ಮತ್ತು ನನ್ನ ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿರುತ್ತೇವೆಂದರೆ ಸರಿ. ನನ್ನ ಕುಟುಂಬದ ಯಜಮಾನಿಕೆಯನ್ನು ನನ್ನ ಗಂಡ ನೋಡಿಕೊಳ್ಳುತ್ತಿದ್ದಾರೆಂದರೆ ಸರಿ. ಆ ಕಾರಣಕ್ಕಾಗಿ ನಾನು ಸದರಿ ದಾವಾಸ್ತಿಯನ್ನು ನನ್ನ ಗಂಡನ ಹೆಸರಿಗೆ ನೊಂದಣಿ ಮಾಡಿಸಿರುತ್ತೇನೆಂದರೆ ಸರಿ. ದಾವಾ ಜಮೀನನ್ನು ಇವತ್ತಿನವರೆಗೂ ನಾನು ಮತ್ತು ನನ್ನ ಗಂಡ ಸಾಗು ಮಾಡುತ್ತೇವೆಂದರೆ ಸರಿ. ನನ್ನ ಗಂಡ ಜಮೀನನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಸಮಯದಲ್ಲಿ ನೀವು ತಕರಾರು ಮಾಡಿದ್ರಾ ಎಂದರೆ ಸಾಕ್ಷಿಯು ನಾನು ಊರಲ್ಲಿಲ್ಲದ ಸಮಯದಲ್ಲಿ ಮಾರಾಟ ಮಾಡಿದ್ದಾರೆನ್ನುತ್ತಾರೆ. 2 ಮತ್ತು 3 ನೇ ಪ್ರತಿವಾದಿಯರು ಖರೀದಿ ವಿಚಾರ ನನಗೆ ತಿಳಿಸಲಿಲ್ಲ. ನನ್ನ ಗಂಡನಿಗೆ ದಾವಾ ಜಮೀನನ್ನು 2 ನೇ ಪ್ರತಿವಾದಿಗೆ ಮಾರಾಟ ಮಾಡುವ ಯಾವುದೇ ಅಧಿಕಾರ ಇರುವುದಿಲ್ಲವೆಂದರೆ ಸರಿ. ಇವತ್ತಿಗೂ ನಾನು, ನನ್ನ ಗಂಡ ಮತ್ತು ಮಕ್ಕಳು ಒಂದೇ ಮನೆಯಲ್ಲಿ ವಾಸವಾಗಿದ್ದು ನಾವು ಜಂಟಿಯಾಗಿ ದಾವಾ ಜಮೀನನ್ನು ಸಾಗು ಮಾಡುತ್ತೇವೆಂದರೆ ಸರಿ.

ಮೂಲ ದಾವಾ ಸಂಖ್ಯೆ. 84/2017 ಪಿ ಡಬ್ಲ್ಯೂ 1

<u>ಪಾಟೀ ಸವಾಲುಃ 2 ಮತ್ತು 3 ನೇ ಪ್ರತಿವಾದಿ ಪರ ಶ್ರೀ ಬಿ ಬಿ ಆರ್ ವಕೀಲರಿಂದಃ-</u>

ಈಗ ಸುಮಾರು 35 ವರ್ಷದ ಹಿಂದೆ 1 ನೇ ಪ್ರತಿವಾದಿ ನನಗೆ ವಿವಾಹವಾಗಿರುತ್ತಾರೆ. ನನ್ನ ಗಂಡ ನನ್ನನ್ನು ಹೊರತುಪಡಿಸಿ ಬೇರೆ ಯಾರನ್ನೂ ಮದುವೆಯಾಗಿರುವುದಿಲ್ಲ. ನಾನು ಮತ್ತು ನನ್ನ ಗಂಡ ಕೂಡು ಕುಟುಂಬದಲ್ಲಿ ವಾಸವಾಗಿರುತ್ತೇವೆ. ನನ್ನ ಕುಟುಂಬದ ಎಲ್ಲಾ ವ್ಯವಹಾರಗಳನ್ನು 1 ನೇ ಪ್ರತಿವಾದಿ ನನ್ನ ಗಂಡ ನೋಡಿಕೊಳ್ಳುತ್ತೇನೆ. ಯಾವುದೇ ವ್ಯವಹಾರವನ್ನು ಮಾಡಿದರೆ ನನ್ನ ಗಂಡ ನನಗೆ ತಿಳಿಸಿ ಮಾಡುತ್ತಾರೆಂದರೆ ಸರಿಯಲ್ಲ.

ನನಗೆ ಮೂರು ಜನ ಮಕ್ಕಳು ಇರುತ್ತಾರೆ. ನನ್ನ ಗಂಡ ಹಮಾಲಿ ಕೆಲಸ ಮಾಡುತ್ತಾರೆ. ನನ್ನ ಗಂಡ ದಿನಕ್ಕೆ ರೂ.150/- ಕೂಲಿ ಪಡೆಯುತ್ತಾರೆ. ನನ್ನ ದುಡಿಮೆ ಮತ್ತು ನನ್ನ ಗಂಡನ ದುಡಿಮೆಗಿಂತ ನಮ್ಮ ಕುಟುಂಬದ ಖರ್ಚು ಹೆಚ್ಚು ಆಗುತ್ತಿತ್ತು. ನನ್ನ ಮಕ್ಕಳ ಮದುವೆಯಾಗಿದೆ. ನಮ್ಮ ಮಕ್ಕಳ ಮದುವೆಗಾಗಿ ಅಲ್ಪ ಸ್ವಲ್ಪ ಸಾಲವನ್ನು ಮಾಡಿರುತ್ತೇವೆ. ನನ್ನ ಮಗಳ ಮದುವೆಯಾಗಿ ಸುಮಾರು 18 ವರ್ಷವಾಗಿದೆ. ನಂತರ ಒಂದೆರಡು ವರ್ಷದಲ್ಲಿ ಗಂಡು ಮಕ್ಕಳ ಮದುವೆ ಸಹಾ ಆಗಿದೆ.

(ಈ ಹಂತದಲ್ಲಿ 2 ಮತ್ತು 3 ನೇ ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದು ನೀಡಲಾಯಿತು.)

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಲಾಯಿತು.)

ಓ. ಹೇ. ಕೇ. ಸರಿ ಇದೆ,

ಸಿವಿಲ್ ಜಡ್ಜ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ